ದಿನಾಂಕಃ **28-03-2024** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣವಚನ ಬೋಧಿಸಲಾಯಿತು.

**ಶ್ರೀ ಎಸ್.ಎ.ಎನ್. ವಾದಿ ಪರ ವಕೀಲರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಕೋರಿದ್ದು. ಅನುಮತಿಸಲಾಯಿತು.**

**ಪಾಟೀ ಸವಾಲು ಃ ವಾದಿ ಪರ ವಕೀಲರಾದ ಶ್ರೀಎಸ್.ಎ.ಎನ್.ರವರಿಂದ ಃ**

**1.** ದಿಃ18.05.1985 ರಂದು ವಾದಿ ಮತ್ತು 1 ನೇ ಪ್ರತಿವಾದಿಯು ಅವರ ಕುಟುಂಭದ ಸ್ವತ್ತುಗಳಿಗೆ ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಪಾಪೇಗೌಡ ಎಂದರೆ ಸರಿ. ಸದರಿ ವಿಭಾಗ ಪತ್ರದಂತೆ ನನ್ನ ತಂದೆಗೆ 14 ಗುಂಟೆ ಸ್ವತ್ತು ಸರ್ವೇ ನಂಃ104 ರಲ್ಲಿ ಬಂದಿದೆ ಎಂದರೆ ಸರಿ. ಸರ್ವೇ ನಂಃ104 ರ ಒಟ್ಟು ವಿಸ್ತೀರ್ಣ 3 ಎಕರೆ 20 ಗುಂಟೆ ಎಂದರೆ ಸರಿ. ನನ್ನ ಪ್ರಮಾಣ ಪತ್ರದ ಅಂಶಗಳು ಪಾಲು ಪಟ್ಟಿಯ ಅಧಾರದ ಮೇಲೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಪ್ರಮಾಣ ಪತ್ರದಲ್ಲಿ ಹೇಳಿರುವ ಚೆಕ್ಕುಬಂದಿ ನಾನು ಪಕ್ಕದ ಜಮೀನಿನವನಾದ ಕಾರಣ ಗೊತ್ತಿದೆ. ನನ್ನ ತಂದೆಯ ಹಿಸ್ಸೆಯ ಭಾಗ ಅವರು ತೀರಿಕೊಂಡ ನಂತರ ನನಗೆ ಬಂದಿದೆ. ನನ್ನ ತಂದೆಗೆ ಖಾತೆಯಾದಾಗ ಪಾಲು ಪಟ್ಟಿಯ ಅಧಾರದ ಮೇಲೆ ಅವರ ಹಿಸ್ಸೆ ನಮೂದಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಯ ಹೆಸರಿಗಿರುವ ಪಹಣಿ ಮತ್ತು ಮ್ಯುಟೇಶನ್ ನೋಡಿದ್ದೇನೆ. ಸದರಿ ದಾಖಲೆಗಳು ನನ್ನ ಬಳಿ ಇವೆ. ವಾದಿ ಸಣ್ಣೇಗೌಡರಿಗೆ 55 ಗುಂಟೆ, ಗೋವಿಂದೇಗೌಡರಿಗೆ 24 ಗುಂಟೆ, 1 ನೇ ಪ್ರತಿವಾದಿಗೆ 30 ಗುಂಟೆ, ಪಾಪೇಗೌಡ ಮತ್ತು ಪುಟ್ಟೇಗೌಡನಿಗೆ ತಲಾ 12 ಗುಂಟೆ ಪಾಲುಪಟ್ಟಿಯಂತೆ ಹಿಸ್ಸೆ ಬಂದಿದೆ ಎಂದರೆ ಸರಿ. ಸದರಿ ಸ್ವತ್ತು ವಾದಿಯ ಪಿತ್ರಾರ್ಜಿತ ಸ್ವತ್ತು ಎಂದರೆ ಸರಿ.

2. ಪಾಲುಪಟ್ಟಿಯಂತೆ ಬಂದಿರುವ ಹಿಸ್ಸೆಯ ಸ್ವತ್ತುಗಳನ್ನು ಸರ್ವೇ ಇಲಾಖೆಯಿಂದ ಅಳತೆ ಮಾಡಿಸಿ ಪ್ರತ್ಯೇಕವಾಗಿ ತೆಗೆದುಕೊಳ್ಳಲು ನನಗೇನು ತೊಂದರೆ ಇಲ್ಲ. 1 ನೇ ಪ್ರತಿವಾದಿಗೆ ಸಹಾಯವಾಗಲೆಂದು ಸುಳ್ಳು ಪ್ರಮಾಣ ಪತ್ರಿಕೆ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಬಂದ ಸ್ವತ್ತಿನ ಚೆಕ್ಕುಬಂದಿ ಪೂರ್ವಕ್ಕೆಃ ಸರ್ಕಾರಿ ಆಸ್ಪತ್ರೆ, ಪಶ್ಚಿಮಕ್ಕೆಃ 1 ನೇ ಪ್ರತಿವಾದಿಯ ಜಮೀನು, ಉತ್ತರಕ್ಕೆಃ ಮೊಟಮ್ಮನ ಜಮೀನು, ದಕ್ಷಿಣಕ್ಕೆಃ ಪುಟ್ಟೇಗೌಡರ ಜಮೀನು ಇದೆ. ಗೊವಿಂದೇಗೌಡರ 24 ಗುಂಟೆ ಸ್ವತ್ತು ನಮ್ಮ ಜಮೀನಿನ ಪಶ್ಚಿಮಕ್ಕೆ ಇರುವ 1

ನೇ ಪ್ರತಿವಾದಿಯ ಸ್ವತ್ತಿನ ದಕ್ಷಿಣಕ್ಕೆ ಬರುತ್ತದೆ. ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವ ಚೆಕ್ಕುಬಂದಿ ನನ್ನ ತಂದೆಯ ಹಿಸ್ಸೆಗೆ ಬಂದ ಸ್ವತ್ತಾಗಿದೆ. ನಾನು ಈಗ ಮೇಲೆ ಹೇಳಿದ ಚೆಕ್ಕುಬಂದಿ ಮತ್ತು ಪ್ರಮಾಣ ಪತ್ರದಲ್ಲಿ ಹೇಳಿದ ಚೆಕ್ಕುಬಂದಿ ವ್ಯತಿರಿಕ್ತತೆ ಇಂದ ಕೂಡಿದೆ ಎಂದರೆ ಸರಿಯಲ್ಲ. ವಾದಿಗೆ 55 ಗುಂಟೆ ಸ್ವತ್ತು ಬಂದಿದ್ದು ಅದರಲ್ಲಿ 1 ಎಕರೆ 1 ಗುಂಟೆ ಮಾರಾಟ ಮಾಡಿ ಉಳಿಕೆ ಸ್ವತ್ತಿನಲ್ಲಿ ಮಾಲೀಕರಾಗಿ ಸ್ವಾದೀನದಲ್ಲಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಮತ್ತು 1 ನೇ ಪ್ರತಿವಾದಿ ಅನ್ಯೂನ್ಯವಾಗಿದ್ದೇವೆ ಎಂದರೆ ಸರಿ. 1 ನೇ ಪ್ರತಿವಾದಿಗೆ ಸಹಾಯವಾಗಲೆಂದು ಸುಳ್ಳು ಪ್ರಮಾಣ ಪತ್ರಿಕೆ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>**ಪಾಟೀ ಸವಾಲು ಃ ವಾದಿ ಪರ ವಕೀಲರಾದ ಶ್ರೀ ಸಿ.ಎಂ.ರವರಿಂದ ಃ**</u>

**1.** ಪೂರ್ವಕ್ಕೆಃ ಚಿಕ್ಕನಿಂಗೇಗೌಡರ ಜಮೀನು, ಪಶ್ಚಿಮಕ್ಕೆಃ ಬೆಟ್ಟೇಗೌಡರ ಜಮೀನು, ಉತ್ತರಕ್ಕೆಃ ಸರ್ಕಾರಿ ಕೆರೆ, ದಕ್ಷಿಣಕ್ಕೆಃ ಚಿನಕುರಳಿ-ಮೇಲುಕೋಟೆ ರಸ್ತೆ. ಈ ಚೆಕ್ಕುಬಂದಿಯಲ್ಲಿ ವಾದಿ ಸಣ್ಣೇಗೌಡರು ಮಾಲೀಕನಾಗಿ ಸ್ವಾದೀನದಲ್ಲಿದ್ದಾರೆ ಎಂದರೆ ಸರಿ. ಅದನ್ನು ಒರತು ಪಡೆಸಿ ಸರ್ವೇ ನಂಃ104 ರಲ್ಲಿ ವಾದಿಯು ಸ್ವಾದೀನದಲಿಲ್ಲ ಎಂದರೆ ಸರಿ. ಮೇಲೆ ಹೆಳಿದ ಚೆಕ್ಕುಬಂದಿಯ ಸ್ವತ್ತನ್ನು ಸಣ್ಣೇಗೌಡ ಮಾರಾಟ ಮಾಡಿದ್ದಾರೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ 1 ನೇ ಪ್ರತಿವಾದಿಯು ಸ್ವಾದೀನದಲ್ಲಿದ್ದಾರೆ ಎಂದರೆ ಸರಿ.

<u>**ಪಾಟೀ ಸವಾಲು ಃ ಪ್ರತಿವಾದಿ 3 ಮತ್ತು 4 ಪರ ವಕೀಲರಾದ ಶ್ರೀ ಕೆ.ಎಂ.ಆರ್.ರವರಿಂದ ಃ**</u>

**1.** ದಾವಾ ಸ್ವತ್ತಿನ ಸರ್ವೇ ನಂಬರ್ 104. ದಾವಾ ಸ್ವತ್ತಿನ ದಾಖಲೆ ವಾದಿ ಸಣ್ಣೆಗೌಡನ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಹೆಸರಿನಲ್ಲಿರುವ ಪಹಣಿ ನೊಡಿದ್ದೇನೆ. ದಾವಾ ಸ್ವತ್ತಿನ ಚೆಕ್ಕುಬಂದಿಯ ದಾಖಲೆಗಳನ್ನು ನೋಡಿಲ್ಲ. ದಾವಾ ಸ್ವತ್ತು ವಾದಿ ಸಣ್ಣೇಗೌಡನ ಪಿತ್ರಾರ್ಜಿತ ಸ್ವತ್ತು ಎಂದರೆ ಗೊತ್ತಿಲ್ಲ. ಸಣ್ಣೇಗೌಡ ತೀರಿಕೊಂಡ ನಂತರ ಆತನ ಹೆಂಡತಿ ಮಕ್ಕಳು ಸದರಿ ಸ್ವತ್ತಿನ ವಾರಸುದಾರರು ಎಂದರೆ ನನಗೆ ಗೊತ್ತಿಲ್ಲ. ಸಣ್ಣೇಗೌಡನ ಮಗ ಎನ್.ಎಸ್. ಪ್ರಸಾದ್ ತೀರಿಕೊಂಡಿದ್ದು ಆತನ ಹೆಂಡತಿ ಮತ್ತು ಮಗಳು ಸದರಿ ಸ್ವತ್ತಿನ ಹಿಸ್ಸೆಯುಳ್ಳವರು ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ 1 ನೇ ಪ್ರತಿವಾದಿ ಎಂದಿಗೂ ಸ್ವಾದೀನದಲಿಲ್ಲ ಎಂದರೆ ಸರಿಯಲ್ಲ.

**2.** ಪ್ರತಿವಾದಿ 2 ಮತ್ತು 3 ರವರು ವಾದಿ 2 ಮತ್ತು 3 ಮತ್ತು ಇತರರ ವಿರುದ್ದ ಅಸಲು ದಾವಾ ಸಂಖ್ಯೆಃ 32/18 ರಂತೆ ವಿಭಾಗಕ್ಕಾಗಿ ದಾವೆ ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಬಗ್ಗೆ ನನಗೆ ಎಲ್ಲ ಗೊತ್ತಿದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಣ್ಣೇಗೌಡ ತೀರಿಕೊಂಡ ನಂತರ ಇಂದಿಗೂ ವಾದಿ ಮತ್ತು ಆತನ ಹೆಂಡತಿ ಮಕ್ಕಳು ಸ್ವಾದೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ವಾದಿ 1 ರಿಂದ 3, ಮತ್ತು ಪ್ರತಿವಾದಿ 2 ಮತ್ತು 3 ರವರು ದಾವಾ ಸ್ವತ್ತಿನ ಮಾಲೀಕರು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಸ್ವತ್ತಿನಲ್ಲಿ ಯಾವುದೇ ಹಕ್ಕು ಅಧಿಕಾರ ಹೊಂದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ನನ್ನ ಚಿಕ್ಕಪ್ಪ ಆದ ಕಾರಣ ಆತನಿಗೆ ಸಹಾಯವಾಗಲೆಂದು ಸುಳ್ಳು ಪ್ರಮಾಣ ಪತ್ರಿಕೆ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

**ಓ. ಹೇ. ಕೇ. ಸ. ಇದೆ.**

**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**
**ಸಾಕ್ಷಿದಾರರ ಸಹಿ.** **ಪಾಂಡವಪುರ.**